# ಸಮಾಚಾರ ಸಮೀಕ್ಷೆ – ಆಗಸ್ಟ್ 2012

## ಶಿಕ್ಷಣ ಹಕ್ಕು ಕಾಯ್ದೆ ಅಥವಾ Right to Education (RTE)

## ಸುದ್ದಿ:

ಈ ವರ್ಷದಿಂದಲೇ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದಿದೆ. ಬಹಳ ಹಿಂದೆಯೇ ಜಾರಿಯಾಗಬೇಕಿದ್ದ ಈ ಕಾಯ್ದೆ ಇಂದಾದರೂ ಜಾರಿಗೆ ಬರುತ್ತಿರುವುದು ಸಂತೋಷದ ಸಂಗತಿ. ಭಾರತದ ಪ್ರತಿಯೊಂದು ಮಗುವಿಗೂ ಪ್ರಾಥಮಿಕ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕು. ಈ ಉನ್ನತ ಉದ್ದೇಶವನ್ನು ನನಸಾಗಿಸಲು ಈ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಭಾರತದ ಪ್ರತಿಯೊಂದು ಮಗುವನ್ನು ಸಾಕ್ಷರರನ್ನಾಗಿ ಮಾಡುವ ಸಾಮಾಜಿಕ ಹೊಣೆಗಾರಿಕೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಕೂಡಾ ಭಾಗಿಯಾಗಿ ಮಾಡುತ್ತಿರುವುದು ಈ ಕಾಯ್ದೆಯ ಒಂದು ಶ್ಲಾಘನೀಯ ಅಂಶವಾಗಿದೆ. ಇತ್ತೀಚೆಗೆ ಈ ಕಾಯ್ದೆಯನ್ನು ಜಾರಿಗೊಳಿಸುವ ಪ್ರಯತ್ನ ಎಲ್ಲ ರಾಜ್ಯಗಳಲ್ಲಿ ನಡೆದಿದೆ. ಕೇಂದ್ರ ಸರಕಾರದ ಈ ಪ್ರಯತ್ನವನ್ನು ಪ್ರಶ್ನಿಸಿ ಕೆಲವು ಅಲ್ಪಸಂಖ್ಯಾತರ ಮಾಲಿಕತ್ವದ ಶಿಕ್ಷಣ ಸಂಸ್ಥೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಸಂವಿಧಾನದತ್ತ ಅಧಿಕಾರದಂತೆ ಈ ಪ್ರಕ್ರಿಯೆಯಿಂದ ವಿನಾಯಿತಿಯನ್ನು ಕೇಳಿದವು. ನ್ಯಾಯಾಲಯದ ಪೀಠವು ಅದರಂತೆ ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಈ ಕಾಯ್ದೆಯಿಂದ ವಿನಾಯಿತಿಯನ್ನು ನೀಡಿತು.

### ಹಿನ್ನೆಲೆ:

2011ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತಾ ಪ್ರಮಾಣ ಸುಮಾರು ಶೇಕಡಾ 73ರಷ್ಟು ಇದೆ. ಅರ್ಥಾತ್, ನಮ್ಮ ದೇಶದ 30 ಕೋಟಿ ಜನರು ಇಂದಿಗೂ ಅಕ್ಷರ ಕಲಿತಿಲ್ಲ! ಈ ಸಂಖ್ಯೆಯು ಅದೆಷ್ಟೋ ದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿದೆ. ಇಷ್ಟು ದೊಡ್ಡ ಸಂಖ್ಯೆಯ ಅನಕ್ಷರಸ್ಥರನ್ನಿಟ್ಟುಕೊಂಡು ದೇಶವು ಮುಂದುವರೆಯುವುದಾದರೂ ಹೇಗೆ? ಈ ಜನರಿಗೆ ಸಾಕ್ಷರರಾಗಲು ಇರುವ ದೊಡ್ಡ ಅಡ್ಡಿ ಬಡತನ. ಶಿಕ್ಷಣಕ್ಕೆ ಸಂಬಂಧಿಸಿದಂತೆ ನಮ್ಮ ದೇಶದಲ್ಲಿ ಬಡವರ ಮಕ್ಕಳು ಮತ್ತು ಶ್ರೀಮಂತರ ಮಕ್ಕಳ ನಡುವೆ ಬಹು ದೊಡ್ಡ ಅಂತರವಿದೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ಶ್ರೀಮಂತರ ಮಕ್ಕಳಿಗೆ ಪಬ್ಲಿಕ್ ಶಾಲೆಗಳು, ಕಾನ್ವೆಂಟ್ ಶಾಲೆಗಳು, ಅಂತರ್ರಾಷ್ಟ್ರೀಯ ಶಾಲೆಗಳು ಲಭ್ಯವಿದೆ – ಇವರು ಯಾವ ಮಟ್ಟದ ಶುಲ್ಕವನ್ನಾದರೂ ನೀಡಿ ಶಿಕ್ಷಣ ಪಡೆಯುವ ಬಲ ಹೊಂದಿದ್ದಾರೆ. ಆದರೆ, ಬಡವರಿಗೆ ಉಚಿತ ಶಿಕ್ಷಣ ನೀಡುವ ಸರಕಾರಿ ಶಾಲೆಗೆ ಕಳುಹಿಸುವುದೂ ಕಠಿಣ ಮತ್ತು ಜೊತೆಗೆ ಸರಕಾರೀ ಶಾಲೆಗಳು ಸೌಲಭ್ಯವಂಚಿತ. ಈ ಅಂತರವನ್ನು ತುಂಬಲು, ಒಳ್ಳೆಯ ಶಿಕ್ಷಣ ಸೌಲಭ್ಯ ಹೊಂದಿರುವ ಶಾಲೆಗಳು ಬಡವರ ಮಕ್ಕಳಿಗೂ ಶಿಕ್ಷಣ ನೀಡಬೇಕು. ಹಾಗಾದಾಗ ಮುಂದಿನ ದಶಕದಲ್ಲಾದರೂ ಭಾರತವು ಶತಪ್ರತಿಶತ ಸಾಕ್ಷರತೆಯತ್ತ ದಾಪುಗಾಲು ಹಾಕಬಹುದು.

ಸಂವಿಧಾನದ 21ನೇ ವಿಧಿ ವಿಭಾಗ'ಎ' (Article 21A)ಗೆ ತಿದ್ದುಪಡಿಯನ್ನು ತರುವ ಮೂಲಕ 2002ರಲ್ಲಿ ಮಾನವ ಸಂಪನ್ಮೂಲ ಸಚಿವರಾಗಿದ್ದ ಡಾ. ಮುರಳಿ ಮನೋಹರ ಜೋಷಿಯವರು ಈ ಕಾಯ್ದೆಯನ್ನು ಜಾರಿಗೆ ತರುವ ಪ್ರಕ್ರಿಯೆ ಪ್ರಾರಂಭಿಸಿದರು. ಇದಾದ ಹಲವು ವರ್ಷಗಳ ನಂತರ (ಸರಕಾರಗಳೇ ಬದಲಾಗಿ ಹೋದ ನಂತರ) 'ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕು ಕಾಯ್ದೆ–2009' ಅಸ್ತಿತ್ವಕ್ಕೆ ಬಂದಿತು. ಈ ಕಾಯ್ದೆಯ ಬಹುಮುಖ್ಯ ಅಂಶ, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಹೊರತು ಪಡಿಸಿ ಉಳಿದೆಲ್ಲ ಶಿಕ್ಷಣ ಸಂಸ್ಥೆಗಳು – ಸರಕಾರಿ ಮತ್ತು ಸರಕಾರೇತರ – ತಮ್ಮ ಸಂಸ್ಥೆಗಳಲ್ಲಿ ಶೇಕಡ 25ರಷ್ಟು ಸ್ಥಾನಗಳನ್ನು ಬಡಮಕ್ಕಳಿಗಾಗಿ ಮೀಸಲಾಗಿಡಬೇಕು. ಮತ್ತು ಶಿಕ್ಷಣವು ಕಡ್ಡಾಯವಾಗಿರುವುದರಿಂದ, 14 ವರ್ಷದೊಳಗಿನ ಪ್ರತಿಯೊಂದು ಮಗುವೂ ಶಾಲೆಗೆ ಸೇರಲೇಬೇಕು.

ಅನುದಾನರಹಿತ ಖಾಸಗಿ ಶಾಲೆಗಳ ಒಕ್ಕೂಟ (KUSMA)ವು ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೆ ತರುವುದನ್ನು ಪ್ರತಿಭಟಿಸಿ, ತನ್ನ ಅಂಕಿತದಲ್ಲಿರುವ ಶಾಲೆಗಳಿಗೆ ಒಂದು ವಾರ ರಜೆ ಘೋಷಿಸಿತು. ಅವುಗಳ ಪೈಕಿ ಹೆಚ್ಚಿನ ಶಾಲೆಗಳು ಈ ಮುಷ್ಕರಕ್ಕೆ ಸಹಕಾರ ನೀಡಲಿಲ್ಲವೆನ್ನುವುದು ಹರ್ಷದ ಸಂಗತಿ.

ಬೆಂಗಳೂರಿನ ಒಂದು ಶಾಲೆಯಲ್ಲಿ ಶಿಕ್ಷಣ ಹಕ್ಕು ಕಾಯ್ದೆಯಡಿ ಬಂದ ಮಕ್ಕಳ ತಲೆಕೂದಲು ಕತ್ತರಿಸಿರುವುದು, ಅವರ ಊಟದ ಡಬ್ಬಿಯನ್ನು ಪರೀಕ್ಷಿಸುವುದು, ಅವರಿಗೆ ಸರಿಯಾಗಿ ಪಾಠ ಹೇಳಿಕೊಡುತ್ತಿಲ್ಲದಿರುವುದು ಇತ್ಯಾದಿ ದೂರುಗಳು ಕೇಳಿಬಂದಿವೆ. ಇದರ ವಿರುದ್ಧ ದಲಿತ ಮುಖಂಡರು ಪ್ರತಿಭಟಿಸಿದ್ದಾರೆ.

**ವಿಶ್ಲೇಷಣೆ:**

1. ಈ ಕಾಯ್ದೆಯಿಂದ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ 'ಮೂಲಭೂತ ಸ್ವರೂಪ'ಕ್ಕೆ ಧಕ್ಕೆಯಾಗುತ್ತದೆ ಎನ್ನುವ ಕಾರಣಕ್ಕೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಸರಕಾರವು ಜಾರಿಗೆ ತಂದ ಕಾಯ್ದೆಯಲ್ಲಿ ಈ ಅಂಶವಿಲ್ಲದಿದ್ದರೂ, ಸರ್ವೋಚ್ಚ ನ್ಯಾಯಾಲಯವು ಈ ತಿದ್ದುಪಡಿಯನ್ನು ಸೇರಿಸಿದೆ.

2. ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಅಲ್ಪಸಂಖ್ಯಾತರಾಗಿದ್ದರೆ ಆ ಸಂಸ್ಥೆಯನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂದು ಪರಿಗಣಿಸಲಾಗುತ್ತದೆ. ಆದರೆ, ಅಲ್ಪಸಂಖ್ಯಾತರು ಯಾರು ಎನ್ನುವುದರ ಬಗೆಯೇ ಸ್ಪಷ್ಟತೆ ಇಲ್ಲ. ಕೆಲವರು ಧಾರ್ಮಿಕ ಅಲ್ಪಸಂಖ್ಯಾತರಾದರೆ, ಮತ್ತೆ ಕೆಲವರು ಭಾಷಾ ಅಲ್ಪಸಂಖ್ಯಾತರು, ಮತ್ತೆ ಕೆಲವರು ಪ್ರಾಂತೀಯ ಅಲ್ಪಸಂಖ್ಯಾತರು.

3. ಅಲ್ಪಸಂಖ್ಯಾತ ಶಾಲೆಗಳು 'ಅಲ್ಪಸಂಖ್ಯಾತ' ಹಣೆಪಟ್ಟಿ ಕಟ್ಟಿಕೊಂಡಿರುವುದು ಆಡಳಿತ ಮಂಡಳಿಯ ಹೆಚ್ಚಿನ ಜನ ಅಲ್ಪ ಸಂಖ್ಯಾತರೆನ್ನುವ ಕಾರಣಕ್ಕೇ ಹೊರತು ಹೆಚ್ಚಿನ ಅಲ್ಪಸಂಖ್ಯಾತ ಮಕ್ಕಳು ಬರುತ್ತಿದ್ದಾರೆ ಎನ್ನುವ ಕಾರಣಕ್ಕಲ್ಲ. ಹೀಗಿರುವಾಗ ಶೇಕಡಾ 25ರಷ್ಟು ಬಡಮಕ್ಕಳನ್ನು ಸೇರಿಸಿಕೊಳ್ಳುವುದರಿಂದ ಆ ಶಿಕ್ಷಣ ಸಂಸ್ಥೆಗಳ 'ಮೂಲಭೂತ ಸ್ವರೂಪ'ಕ್ಕೆ ಧಕ್ಕೆಯಾಗುತ್ತದೆ ಎನ್ನುವುದರಲ್ಲಿ ಅರ್ಥವಿಲ್ಲ.

4. ಕೆಲವು ಅಲ್ಪಸಂಖ್ಯಾತ ಸಮುದಾಯಗಳ ಹೆಚ್ಚಿನ ಜನ ಅನಕ್ಷರಸ್ಥರಾಗಿದ್ದಾರೆ. ಇವರಿಗೆ ಉಚಿತ ಶಿಕ್ಷಣ ನೀಡುವುದು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಕರ್ತವ್ಯವಲ್ಲವೆ?

5. ದೇಶದ ಅತ್ಯಂತ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರೇ. ಆದರೆ, ಅಲ್ಲಿ ಕಲಿಯುತ್ತಿರುವ ಹೆಚ್ಚಿನ ಮಂದಿ ಬಹುಸಂಖ್ಯಾತ ಸಮುದಾಯಕ್ಕೆ ಸೇರಿದವರು. ಇಂತಹ ಸಂಸ್ಥೆಗಳು ನೀಡುವ ಉನ್ನತ ಶಿಕ್ಷಣ ಸೌಲಭ್ಯದಿಂದ ಬಡವರ ಮಕ್ಕಳೇಕೆ ವಂಚಿತರಾಗಬೇಕು? ಈ ಶಿಕ್ಷಣ ಸಂಸ್ಥೆಗಳಿಗೆ ಸಾಮಾಜಿಕ ಹೊಣೆಗಾರಿಕೆ ಇಲ್ಲವೇ?

6. ಈ ಕಾಯ್ದೆಯನ್ನು ಜಾರಿಗೆ ತರುವುದು ಸುಲಭದ ಮಾತಲ್ಲ. ಖಾಸಗಿ ಶಾಲೆಗಳು ಇದನ್ನು ಹೇಗೆ ಸ್ವೀಕರಿಸುತ್ತವೆ ಎಂಬುದರ ಮೇಲೆ ಇದರ ಜಾರಿ ನಿಂತಿದೆ. ಖಾಸಗಿ ಶಾಲೆಗಳು ಮುಕ್ತಮನಸ್ಸಿನಿಂದ ಇದನ್ನು ಜಾರಿಗೆ ತರದಿದ್ದರೆ, ಸರಕಾರ ಏನು ಮಾಡುತ್ತದೆ? ಖಾಸಗಿ ಶಾಲೆಗಳಲ್ಲಿ ಬಡವರ ಮಕ್ಕಳ ಬಗ್ಗೆ ತಾರತಮ್ಯ ಧೋರಣೆ ಬರದಂತೆ ಮಾಡಲು ಯಾವ ಕ್ರಮಗಳನ್ನು ಯೋಚಿಸಲಾಗಿದೆ?

7. ಖಾಸಗಿ ಶಾಲೆಗಳಿಗೆ ಶೇಕಡಾ 22.6 ಮಕ್ಕಳು ಹೋದರೆ, ಉಳಿದೆಲ್ಲಾ ಮಕ್ಕಳೂ ಸರಕಾರಿ ಶಾಲೆಗಳಿಗೆ ಹೋಗುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ಸಂಖ್ಯೆ ಮತ್ತಷ್ಟು ಹೆಚ್ಚಿರುತ್ತದೆ. ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದು ಶೇಕಡ 25ರಷ್ಟು ಬಡವರ ಮಕ್ಕಳು ಖಾಸಗಿ ಶಾಲೆಗಳಿಗೆ ಹೋಗುವಂತಾದರೂ ಬಹುದೊಡ್ಡ ಸಂಖ್ಯೆಯ ಮಕ್ಕಳು ಮುಂದೆಯೂ ಸರಕಾರಿ ಶಾಲೆಗಳಿಗೇ ಹೋಗುತ್ತಾರೆ. ಹೀಗಾಗಿ, ಶಿಕ್ಷಣ ಹಕ್ಕು ಕಾಯ್ದೆಯಿಂದ ತನಗಾವ ಜವಾಬ್ದಾರಿಯೂ ಇಲ್ಲವೆಂದು ಸರಕಾರ ಯೋಚಿಸದೆ, ಸರಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸುವುದರ ಕಡೆಯೂ ತ್ವರಿತವಾಗಿ ಗಮನ ನೀಡಬೇಕು.

8. ಅತ್ಯಂತ ಒಳ್ಳೆಯ ಶಿಕ್ಷಣ ನೀಡುತ್ತಿರುವ ಮತ್ತು ಬಹಳ ಬುದ್ಧಿವಂತ ಮಕ್ಕಳು ಹೊರಬರುತ್ತಿರುವ ಶಿಕ್ಷಣ ಸಂಸ್ಥೆಗಳಿರುವ ದೇಶಗಳ ಶಿಕ್ಷಣ ವ್ಯವಸ್ಥೆಯ ಕುರಿತಾಗಿ ಅಧ್ಯಯನಗಳು ನಡೆದಿವೆ. ಈ ದೇಶಗಳ ಶಿಕ್ಷಣ ವ್ಯವಸ್ಥೆಯ ಬಗ್ಗೆ ಬಂದಿರುವ ವರದಿಗಳಲ್ಲಿ ಮೂರು ಅಂಶಗಳು ಬಹು ಮುಖ್ಯವಾಗಿವೆ: ಮೊದಲನೆಯದಾಗಿ, ಆ ದೇಶಗಳಲ್ಲಿ ಶಾಲೆಯ ಶಿಕ್ಷಕರಾಗುವುದು ಪ್ರತಿಷ್ಠಿತ ಕೆಲಸ ಮತ್ತು ಶಿಕ್ಷಕರಿಗೂ ಅತ್ಯುತ್ತಮ ವರಮಾನವಿರುತ್ತದೆ. ಎರಡನೆಯದಾಗಿ, ಶಿಕ್ಷಕರಿಗೆ ಅತ್ಯುತ್ತಮ ತರಬೇತಿ ನೀಡಲಾಗುತ್ತದೆ. ಮೂರನೆಯದಾಗಿ, ಶಾಲೆಗೆ ಬರುವ ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ಸಿಗುವಂತೆ ಗಮನಿಸಲಾಗುತ್ತದೆ. ಯಾವುದಾದರೂ ಮಗು ಕಲಿಯುವುದರಲ್ಲಿ ಹಿಂದೆ ಬಿದ್ದಲ್ಲಿ ಅದಕ್ಕೆ ಹೆಚ್ಚಿನ ಗಮನ ನೀಡಲಾಗುತ್ತದೆ. ನಮ್ಮ ಸರಕಾರ ಶಿಕ್ಷಣ ನೀತಿಯಲ್ಲಿ ಮಾರ್ಪಾಡು ತರುತ್ತಿರುವ ಸಂದರ್ಭದಲ್ಲಿ ಈ ಅಂಶಗಳನ್ನೂ ಗಮನಿಸಬೇಕು ಮತ್ತು ಸರಕಾರಿ ಶಾಲೆಗಳೂ ಉತ್ತಮ ಶಿಕ್ಷಣ ನೀಡುವುದರ ಕಡೆ ಒತ್ತು ನೀಡಬೇಕು.

9. KUSMA ನಡೆಸಿದ ಪ್ರತಿಭಟನೆ ಕಳವಳಕಾರಿಯಾದದ್ದು. ಅದೇ ರೀತಿ, ಬೆಂಗಳೂರಿನ ಶಾಲೆಯೊಂದು ಬಡವರ ಮಕ್ಕಳನ್ನು ಪ್ರತ್ಯೇಕತಾ ಮನೋಭಾವದಿಂದ ಕಂಡಿರುವುದೂ ಕಳವಳಕಾರಿ ವಿಷಯವಾಗಿದೆ. ಬಡವರ ಮನೆಯ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ತಮ್ಮ ಸಾಮಾಜಿಕ ಜವಾಬ್ದಾರಿ ಎನ್ನುವುದನ್ನು ಈ ಸಂಸ್ಥೆಗಳು ಅರಿತಿರಬೇಕಿತ್ತು. ಶಿಕ್ಷಣವನ್ನು ಕೇವಲ ವ್ಯಾಪಾರೀ ದೃಷ್ಟಿಯಿಂದ ನೋಡಿದಾಗ ಈ ರೀತಿಯ ಅನಾಹುತಗಳಾಗುತ್ತವೆ.

10. ಅವಕಾಶ ವಂಚಿತ ಮಕ್ಕಳಿಗೆ ಶಿಕ್ಷಣ ನೀಡಲು ಕೇವಲ ಶಾಲೆಗಳಿಂದಲೇ ಅಲ್ಲದೆ ಪರ್ಯಾಯ ಮಾರ್ಗವನ್ನು ಅನುಸರಿಸುವುದು ಉಚಿತ. ಈಗ ಅನೇಕ ಸ್ವಯಂಸೇವಾ ಸಂಸ್ಥೆಗಳು ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿವೆ ಮತ್ತು ಯಶಸ್ವಿಯಾಗಿವೆ. ಉದಾ: ರಾಷ್ಟ್ರೋತ್ಥಾನ ಪರಿಷತ್ತಿನ ಅನೌಪಚಾರಿಕ ಶಿಕ್ಷಣ, ಏಕಲ್ ವಿದ್ಯಾಲಯ, ಉಚಿತ ಮನೆಪಾಠ ಯೋಜನೆ ಇತ್ಯಾದಿ.

## ವಿದೇಶೀ ಬಂಡವಾಳಕ್ಕೆ ಭಾರತವಿನ್ನೂ ಪೂರ್ಣವಾಗಿ ತೆರೆದುಕೊಂಡಿಲ್ಲ – ಒಬಾಮಾ ಹೇಳಿಕೆ

**ಸುದ್ದಿ:**

ಭಾರತವು ವಿದೇಶೀ ಬಂಡವಾಳವನ್ನು ಎಲ್ಲ ಕ್ಷೇತ್ರಗಳಲ್ಲೂ ಸ್ವಾಗತಿಸುತ್ತಿಲ್ಲ. ವಿಶೇಷವಾಗಿ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶೀ ಬಂಡವಾಳ ಹೂಡಿಕೆಗೆ ಭಾರೀ ವಿರೋಧ ವ್ಯಕ್ತವಾಗಿದೆ. ಭಾರತವು ವಿದೇಶೀ ಬಂಡವಾಳ ಹೂಡಿಕೆಗೆ ಮುಕ್ತವಾಗಿ ತೆರೆದುಕೊಳ್ಳದಿರುವುದರಿಂದ ಆರ್ಥಿಕ ಹಿಂಜರಿತವಾಗಿದೆ ಎಂದು ಇತ್ತೀಚೆಗೆ ಅಮೇರಿಕದ ರಾಷ್ಟ್ರಾಧ್ಯಕ್ಷ ಬರಾಕ್ ಒಬಾಮಾ ಹೇಳಿಕೆ ನೀಡಿದರು. ಕಾಂಗ್ರೆಸ್ಸಿನಿಂದ ಮೊದಲ್ಗೊಂಡು ಎಲ್ಲಾ ಪಕ್ಷಗಳು ಈ ಹೇಳಿಕೆಯನ್ನು ಖಂಡಿಸಿದವು.

**ಹಿನ್ನೆಲೆ:**

ಜನಸಂಖ್ಯಾ ಬಾಹುಳ್ಯದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಎರಡನೇ ಸ್ಥಾನವನ್ನು ಹೊದಿದೆ. ಹೀಗಾಗಿ ಭಾರತವನ್ನು ಪಶ್ಚಿಮದ ದೇಶಗಳು ದೊಡ್ಡ ಮಾರುಕಟ್ಟೆ ಎನ್ನುವುದನ್ನು ಮನಗಂಡಿವೆ. ಇದಕ್ಕಾಗಿ ಭಾರತದೊಳಗೆ ನುಸುಳಲು ಅವು ಹೊಸ ದಾರಿಗಳನ್ನು ಹುಡುಕುತ್ತಿವೆ. ಆ ರೀತಿಯ ಒಂದು ದಾರಿ ವಿದೇಶೀ ಬಂಡವಾಳ ಹೂಡಿಕೆ. ಭಾರತವು ವಿಶ್ವ ಬ್ಯಾಂಕ್ ಮತ್ತು ಇನ್ನಿತರ ಜಾಗತಿಕ ವಿಶ್ವ ಸಂಸ್ಥೆಗಳಿಂದ ದೊಡ್ಡ ಪ್ರಮಾಣದಲ್ಲಿ ಸಾಲವನ್ನು ತೆಗೆದುಕೊಂಡಿದೆ. 1991ರ ಸಮಯದಲ್ಲಿ ಭಾರತವು ಈ ಸಾಲದ ಬಡ್ಡಿಯನ್ನೂ ತೀರಿಸದ ಸ್ಥಿತಿಯನ್ನು ತಲುಪಿತ್ತು. ಅಂದು ಪರಿಸ್ಥಿತಿಯ ಲಾಭ ಪಡೆದು, ಈ ಜಾಗತಿಕ ವಿಶ್ವ ಸಂಸ್ಥೆಗಳ ಹಿಂದಿರುವ ಪಟ್ಟಭದ್ರ ಹಿತಾಸಕ್ತಿಗಳು ಭಾರತವು ಆರ್ಥಿಕ ಉದಾರೀಕರಣ ಜಾರಿಗೆ ತರಬೇಕು ಮತ್ತು ವಿದೇಶೀ ಬಂಡವಾಳ ಹೂಡಿಕೆಗೆ ಮುಕ್ತವಾಗಿ ತೆರೆದುಕೊಳ್ಳಬೇಕೆಂದು ಶರತ್ತು ವಿಧಿಸಿದ್ದರು. ಅಂದಿನಿಂದ ಭಾರತ ನಿಧಾನವಾಗಿ ಒಂದೊಂದೇ ಕ್ಷೇತ್ರದಲ್ಲಿ ವಿದೇಶೀ ಬಂಡವಾಳ ಹೂಡಿಕೆಗೆ ಅವಕಾಶ ನೀಡುತ್ತಾ ಬಂದಿದೆ. ಇದೀಗ ಚಿಲ್ಲರೆ ವ್ಯಾಪಾರ ಕ್ಷೇತ್ರಕ್ಕೆ ವಾಲ್‌ಮಾರ್ಟ್‌ನಂತಹ ದೈತ್ಯ ಕಂಪನಿಗಳು ಕಾಲಿಡಲು ತುದಿಗಾಲಲ್ಲಿ ನಿಂತಿವೆ. ಭಾರತ ಸರಕಾರವೂ ಈ ಕ್ಷೇತ್ರವನ್ನು ತೆರೆಯಲು ಸಿದ್ಧವಾಗಿತ್ತು. ಆದರೆ, ಕಾಂಗ್ರೆಸ್ಸುಳಿದು ಉಳಿದೆಲ್ಲಾ ಪಕ್ಷಗಳು ವಿರೋಧಿಸಿದ್ದರಿಂದ ಇದು ಇಂದಿನವರೆಗೂ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಬರಾಕ್ ಒಬಾಮಾ ಹೇಳಿಕೆ ನೀಡಿದ್ದಾರೆ.

**ವಿಶ್ಲೇಷಣೆ:**

1. ಕಳೆದ 4–5 ವರ್ಷಗಳಿಂದ ಜಗತ್ತಿನ ಅನೇಕ ರಾಷ್ಟ್ರಗಳು ಆರ್ಥಿಕ ಹಿಂಜರಿತ ಕಂಡಿವೆ. ಅದರಲ್ಲೂ ವಿಶೇಷವಾಗಿ ಅಮೇರಿಕಾ ಮತ್ತು ಯೂರೋಪಿನ ಹೆಚ್ಚಿನ ದೇಶಗಳು ನೆಲಕಚ್ಚುವ ಸ್ಥಿತಿಗೆ ಬಂದಿವೆ. ಇವುಗಳ ಬಿಸಿ ಭಾರತಕ್ಕೂ ತಟ್ಟಿದೆ.
2. ಅಮೇರಿಕಾ ಮತ್ತು ಯೂರೋಪಿನ ರಾಷ್ಟ್ರಗಳು ಆರ್ಥಿಕ ಹಿಂಜರಿತ ಕಂಡಿರುವುದಕ್ಕೆ ಅವುಗಳ ಆರ್ಥಿಕ ನೀತಿಗಳೇ ಕಾರಣ. ಅವಕ್ಕೆ ಹೋಲಿಸಿದರೆ ಭಾರತವು ಇನ್ನೂ ಹೆಚ್ಚು ಹಿಂಜರಿತ ಕಂಡಿಲ್ಲ. ಭಾರತದಲ್ಲಿನ ಕುಟುಂಬ ಪದ್ಧತಿಯ ಕಾರಣದಿಂದಲೇ ಭಾರತವು ಆರ್ಥಿಕವಾಗಿ ಕುಸಿದಿಲ್ಲ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸುತ್ತಿದ್ದಾರೆ.
3. ಭಾರತದ ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪ ಕುಸಿತ ಕಂಡಿದ್ದರೆ, ಅದಕ್ಕೆ ಕಾರಣ ಭಾರತವು ಸ್ವಲ್ಪಮಟ್ಟಿಗೆ ಅಮೇರಿಕಾ ಮತ್ತು ಯೂರೋಪಿನ ದೇಶಗಳ ಮೇಲೆ ಅವಲಂಬಿತವಾಗಿರುವುದು. ಹೀಗಾಗಿ, ವಿದೇಶೀ ಬಂಡವಾಳ ಹೂಡಿಕೆಗೆ ಮುಕ್ತವಾಗಿ ತೆರೆದುಕೊಳ್ಳದಿರುವುದಕ್ಕೂ ಮತ್ತು ಆರ್ಥಿಕ ಹಿಂಜರಿತಕ್ಕೂ ಸಂಬಂಧವಿಲ್ಲ.
4. ಭಾರತವು ವಿದೇಶೀ ಬಂಡವಾಳ ಹೂಡಿಕೆಯನ್ನು ಸ್ವಾಗತಿಸಬೇಕೆನ್ನುವ ಒಬಾಮಾ ಹೇಳಿಕೆಯ ಹಿಂದೆ ಅಮೇರಿಕಾದ ಸ್ವಾರ್ಥವಿದೆ. ಹಾಗೆ ಮಾಡುವುದರಿಂದ ಅಮೇರಿಕಾಕ್ಕೆ ಲಾಭವಾಗುತ್ತದೆಯೇ ಹೊರತು ಭಾರತಕ್ಕೇನೂ ಲಾಭವಿಲ್ಲ.
5. ಚಿಲ್ಲರೆ ವ್ಯಾಪಾರದಂತಹ ಕ್ಷೇತ್ರದಲ್ಲಿ ವಿದೇಶೀ ಬಂಡವಾಳ ಹೂಡಿಕೆಗೆ ಅವಕಾಶ ಕೊಟ್ಟರೆ, ನಮ್ಮ ಸ್ಥಾನೀಯ ವ್ಯಾಪಾರಿಗಳು ನೆಲಕಚ್ಚುವುದರಲ್ಲಿ ಅನುಮಾನವೇ ಇಲ್ಲ. ಮತ್ತು ನಿಧಾನವಾಗಿ ಇಡಿ ಕ್ಷೇತ್ರ ವಿದೇಶೀ ಸಂಸ್ಥೆಗಳ ಏಕಸ್ವಾಮ್ಯಕ್ಕೆ ಬಂದುಬಿಡುತ್ತವೆ. ಆಗ ಅವರು ತಮಗಿಷ್ಟ ಬಂದ ಬೆಲೆಗೆ ವ್ಯಾಪಾರ ಮಾಡುತ್ತಾರೆ ಮತ್ತು ಲಾಭವನ್ನೆಲ್ಲಾ ತಮ್ಮ ದೇಶಕ್ಕೇ ಹೊತ್ತೊಯ್ಯುತ್ತಾರೆ.
6. ಭಾರತದ ಎಲ್ಲಾ ಪಕ್ಷಗಳೂ ಒಬಾಮಾ ಹೇಳಿಕೆಯನ್ನು ವಿರೋಧಿಸಿರುವುದು ಅತ್ಯಂತ ಸಂತೋಷದ ಸಂಗತಿ. ಯುಪಿಎ ಸರಕಾರದ ಮೇಲೆ ಒತ್ತಡ ಹೇರಲು ಒಬಾಮಾ ಈ ರೀತಿ ಹೇಳಿಕೆ ನೀಡಿರಬಹುದು. ಒಬಾಮಾರ ಒತ್ತಡಕ್ಕೆ ಯುಪಿಎ ಸರಕಾರದ ಪ್ರಧಾನಮಂತ್ರಿ ಡಾ॥ ಮನಮೋಹನ್ ಸಿಂಗರು ತಲೆಕೆಡಿಸಿಕೊಳ್ಳದಿರಲಿ.